O.S.No.:222/2014
DW-2

ಈ ದಿನ ದಿಃ10.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ ಕೆ.ವೈ.ಎಸ್ ರವರಿಂದಃ-**

1. ವಾದಿಯ ಮಾವನಾದ ಕಾಡ ರವರ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಕಾಡ ರವರ ವಂಶವೃಕ್ಷದ ಬಗ್ಗೆ ನನಗೆ ಮಾಹಿತಿ ಇಲ್ಲ. ಕಾಡ ರವರ ತಂದೆ ತಾಯಿಗೆ ಅವರು ಒಬ್ಬನೇ ಮಗ ಎಂದರೆ ನನಗೆ ಗೊತ್ತಿಲ್ಲ. ಮಾರೇಗೌಡ ಯಾರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಕಾಡ ರವರ ತಮ್ಮ ಎಂದು ನುಡಿಯುತ್ತಾರೆ. ಮಾರೇಗೌಡ ಈಗ ಬದುಕಿಲ್ಲ. ಮಾರೇಗೌಡ ರವರಿಗೆ ಮಕ್ಕಳು ಇದ್ದರೋ ಇಲ್ಲವೋ ನನಗೆ ಗೊತ್ತಿಲ್ಲ.

2. ದಿನಾಂಕ.08.07.1962ರ ಕ್ರಯಪತ್ರ ನೋಂದಣಿ ಸಮಯದಲ್ಲಿ ನಾನು ನೋಂದಣಿ ಕಚೇರಿಗೆ ಹೋಗಿರಲಿಲ್ಲ. ದಿನಾಂಕ.08.07.1962ರ ಕ್ರಯಪತ್ರವನ್ನು ನಾನು ಖುದ್ದಾಗಿ ನೋಡಿಲ್ಲ. ದಿನಾಂಕ.08.07.1962ರ ಕ್ರಯಪತ್ರದ ಪ್ರಕಾರ ಯಾರು ಯಾರಿಂದ ಆಯಿತು ಎಂಬ ಬಗ್ಗೆ ನನಗೆ ಮಾಹಿತಿ ಇದೆ. ದಿನಾಂಕ.08.07.1962 ರ ಕ್ರಯಪತ್ರದ ಪ್ರಕಾರ ಕಾಡ, ವೀರಭದ್ರ ಮತ್ತು ಮಾರೇಗೌಡ ರವರು ಶಿವಣ್ಣ ರವರಿಗೆ ಸರ್ವೆ ನಂ72/3ರ ಜಮೀನು ಬರೆದುಕೊಟ್ಟಿರುತ್ತಾರೆ.

3. ನಿಡಿ-14ರಂತೆ ಅಂದರೆ ದಿನಾಂಕ.08.07.1962ರ ಕ್ರಯಪತ್ರದ ಪ್ರಕಾರ ಸದರಿ ಖರೀದಿ ಪತ್ರವನ್ನು ಚೂಡೇಗೌಡ ರವರ ಮಗ ಚೂಡೇಗೌಡ ಎನ್ನುವವರು ಪ್ರತಿವಾದಿಯ ತಂದೆಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಕರಿಕುನ್ನ ಎನ್ನುವವರು ನನಗೆ ಗೊತ್ತು. ಸದರಿ ಕರಿಕುನ್ನ ರವರು ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಕರಿಕುನ್ನ ರವರಿಗೆ ಎಷ್ಟು ಆಸ್ತಿಗಳು ಇದ್ದವು ಎಂಬ ಬಗ್ಗೆ ನನಗೆ ಗೊತ್ತಿಲ್ಲ.

4. 1962ನೇ ಸಾಲಿನಲ್ಲಿ ನನಗೆ ಎಷ್ಟು ವರ್ಷ ವಯಸ್ಸು ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ. 1962ನೇ ಸಾಲಿನಲ್ಲಿ ನನಗೆ 4 ರಿಂದ 5ವರ್ಷ ವಯಸ್ಸು ಇತ್ತು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನನಗೆ 1962ನೇ ಸಾಲಿನಲ್ಲಿ ಆದಂತಹ ವ್ಯವಹಾರಗಳ ಬಗ್ಗೆ ಜ್ಞಾನ ಇರಲಿಲ್ಲ ಎಂದರೆ ಸರಿ. ದಾವಾಸ್ವತ್ತಿನ ಸರ್ವೆ ನಂ.72/3 ಆಗಿರುತ್ತದೆ. ದಾವಾಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಚೂಡೇಗೌಡ ರವರ ಗದ್ದೆ, ಪಶ್ಚಿಮಕ್ಕೆ ಸರ್ಕಾರಿ ಒಡ್ಡು, ಉತ್ತರಕ್ಕೆ ನಮಗೆ ಸೇರಿದ ಜಮೀನು ಸರ್ವೆ ನಂ.77/1 ಮತ್ತು ದಕ್ಷಿಣಕ್ಕೆ ಮಾರೇಗೌಡ ಮತ್ತು ಚೂಡೇಗೌಡ ರವರ ಹೊಲ ಬರುತ್ತದೆ.

5. ಸರ್ವೆ ನಂ.72/2ರ ಜಮೀನು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.72/2ರ ಜಮೀನಿಗೆ ಸಂಬಂಧಿಸಿದಂತೆ ಈ ಹಿಂದಿನ ಖಾತೆಯು ನಿಡಿ-2

ರ ಪ್ರಕಾರ ಕರಿಕುನ್ನ ರವರ ಹೆಸರಿಗೆ ಬರುತ್ತಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಡಿ-2ರ ಪ್ರಕಾರ ಸರ್ವೆ ನಂ.72/3 ರ ಜಮೀನಿನ ಖಾತೆಯು ವಾದಿಯ ಮಾವನಾದ ಕಾಡ ಬಿನ್ ವೀರಭದ್ರಯ್ಯ ರವರ ಹೆಸರಿಗೆ ಬರುತ್ತಿತ್ತು ಎಂದರೆ ಸಾಕ್ಷಿಯು ನಾನು ಅವಿದ್ಯಾವಂತ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ-13ರ ಪ್ರಕಾರ ಸದರಿ ಖರೀದಿ ಪತ್ರವನ್ನು ಕಾಡ ಬಿನ್ ವೀರಭದ್ರ ರವರು ಬರೆದುಕೊಟ್ಟಿಲ್ಲ, ಅದನ್ನು ಕರಿಕುನ್ನ ರವರು ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-13ರಡಿಯಲ್ಲಿ ಮಾರಾಟ ಮಾಡಿದ ಜಮೀನಿಗೆ ಸಂಬಂಧಿಸಿದಂತೆ ಖರೀದಿ ಪತ್ರವನ್ನು ಬರೆದುಕೊಡಲು ಕರಿಕುನ್ನ ರವರಿಗೆ ಯಾವುದೆ ಹಕ್ಕು ಅಧಿಕಾರ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕರಿಕುನ್ನ ರವರಿಗೆ ಸರ್ವೆ ನಂ.72/2ಕ್ಕೆ ಸಂಬಂಧಿಸಿದಂತೆ ಮಾತ್ರ ಖರೀದಿ ಪತ್ರ ಬರೆದುಕೊಡಲು ಮಾತ್ರ ಹಕ್ಕು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-13ರಲ್ಲಿ ಕರಿಕುನ್ನ ರವರು ಸರ್ವೆ ನಂ.72/2ನ್ನು ನಮೂದಿಸುವ ಬದಲು ತಪ್ಪಾಗಿ ಸರ್ವೆ ನಂ.72/3 ಎಂದು ನಮೂದಿಸಿ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

6. ನಿಡಿ-13ರಡಿಯಲ್ಲಿ ಆಸ್ತಿ ಯಾರಿಗೆ ಮಾರಾಟ ಆಯಿತು ಎಂಬ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಕರಿಕುನ್ನ ರವರು ಶಿವಣ್ಣ ಉಃ ಚೂಡಲಿಂಗ ರವರಿಗೆ ಮಾರಾಟ ಮಾಡಿರುತ್ತಾರೆ. ಆಸ್ತಿಯನ್ನು ಪ್ರತಿವಾದಿಯ ದೊಡ್ಡಪ್ಪ ಚಿಕ್ಕಪ್ಪಂದಿರು

ಯಾರಿಂದ ಖರೀದಿ ಮಾಡಿರುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಶಿವಣ್ಣ ಉಃ ಚೂಡಲಿಂಗ ರವರ ಕಡೆಯಿಂದ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-13ರಡಿಯಲ್ಲಿ ತಪ್ಪಾಗಿ ನಮೂದಿಸಿದ ಸರ್ವೆ ನಂಬರ್ ನ್ನು ತಿದ್ದುಪಡಿ ಮಾಡಿಕೊಳ್ಳದೆಯೇ ನಿಡಿ-14ರಂತೆ ಖರೀದಿ ಪತ್ರವನ್ನು ಅವರು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ.

7. ದಾವಾಸ್ವತ್ತಿನ ಖಾತೆ ಈಗ ಯಾರ ಹೆಸರಿಗೆ ಬರುತ್ತಿದೆ ಎಂದು ನನಗೆ ಗೊತ್ತಿಲ್ಲ. 1959ನೇ ಇಸವಿಯಿಂದ ಇಂದಿನ ವರೆಗೂ ದಾವಾಸ್ವತ್ತಿನ ಖಾತೆ ಪಹಣಿ ವಾದಿಯ ಮಾವನಾದ ಕಾಡ ಹಾಗೂ ವಾದಿಯ ಹೆಸರಿನಲ್ಲಿಯೇ ಬರುತ್ತಿದೆ ಎಂದರೆ ಸಾಕ್ಷಿಯು ದಾಖಲೆಯನ್ನು ಓದಿ ನೋಡಿದರೆ ಗೊತ್ತಾಗುತ್ತದೆ ಎಂದು ನುಡಿಯುತ್ತಾರೆ. ಸದರಿ ಕಾಡ ರವರು ಮರಣ ಹೊಂದಿದ ನಂತರ ದಾವಾಸ್ವತ್ತಿನ ಖಾತೆಯನ್ನು ವಾದಿ ರವರು ತಮ್ಮ ಹೆಸರಿಗೆ ಪೌತಿ ವಾರಸು ಆಧಾರದ ಮೇಲೆ ವರ್ಗಾವಣೆ ಮಾಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.72ರಲ್ಲಿ ಎಷ್ಟು ಹಿಸ್ಸೆಗಳಾಗಿವೆ ಮತ್ತು ಅವುಗಳು ಯಾರ ಯಾರ ಹೆಸರಿನಲ್ಲಿವೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.72/2ರ ಜಮೀನು ಯಾರ ಹೆಸರಿಗೆ ಇದೆ ಎಂದರೆ ನನಗೆ ಗೊತ್ತಿಲ್ಲ.

8. ಸರ್ವೆ ನಂ.72/2ರ ಖಾತೆಯು ಪ್ರತಿವಾದಿಯ ತಂದೆಯ ಹೆಸರಿಗೆ ಬರುತ್ತಿದೆ

ಎಂದರೆ ಸರಿ. ಸರ್ವೆ ನಂ.72/2ರ ಖಾತೆಯು ಪ್ರತಿವಾದಿಯ ತಂದೆಯ ಹೆಸರಿಗೆ ಯಾವ ದಾಖಲೆಯ ಆಧಾರದ ಮೇಲೆ ಬದಲಾಗಿರುತ್ತದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಸರ್ವೆ ನಂ.72/2ರ ಜಮೀನು ಮಾತ್ರ ಪ್ರತಿವಾದಿಗೆ ಸೇರಿರುತ್ತದೆ ಎಂದರೆ ಸರಿ. ನಿಡಿ-13 ಮತ್ತು ನಿಡಿ-14ರ ಕ್ರಯಪತ್ರಗಳ ಆಧಾರದ ಮೇಲೆಯೇ ಪ್ರತಿವಾದಿಯ ತಂದೆಯ ಹೆಸರಿಗೆ ಸರ್ವೆ ನಂ.72/2ರ ಜಮೀನಿನ ಖಾತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ವತ್ತಿನ ಸರ್ವೆ ನಂಬರ್ ನ್ನು ತಿದ್ದುಪಡಿ ಮಾಡಿಕೊಳ್ಳದೆಯೇ ಪ್ರತಿವಾದಿ ದಾವಾಸ್ವತ್ತನ್ನು ಹೇಗಾದರೂ ಮಾಡಿ ವಾದಿಯಿಂದ ಪಡೆದುಕೊಳ್ಳಬೇಕು ಎಂಬ ದುರುದ್ದೇಶದಿಂದ ಆಕೆಯ ಸ್ವಾಧೀನಾನುಭವಕ್ಕೆ ಪದೇ ಪದೇ ತೊಂದರೆ ಕೊಡುತ್ತಿದ್ದಾರೆ ಎಂದರೆ ಸರಿಯಲ್ಲ.

9. ನನ್ನ ಮುಖ್ಯವಿಚಾರಣ ಪ್ರಮಾಣ ಪತ್ರದ ಸಂಗತಿಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ನನಗೂ ಮತ್ತು ವಾದಿಯ ನಡುವೆ ಸುಮಾರು 25ವರ್ಷಗಳಿಂದ ಜಮೀನಿನ ವಿಚಾರಕ್ಕೆ ಸಂಬಂಧಿಸಿದಂತೆ ಮನಸ್ತಾಪಗಳು ಇವೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಹಾಯ ಮಾಡಬೇಕೆಂಬ ದುರುದ್ದೇಶದಿಂದ ನನಗೆ ಎಲ್ಲ ಸತ್ಯಾಂಶಗಳ ಬಗ್ಗೆ ಮಾಹಿತಿ ಇದ್ದರು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

O.S.No.:222/2014
DW-2

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**